**<u>ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಲಯ, ಸಿರುಗುಪ್ಪ</u>**

**<u>ಸಿ.ಸಿ. ನಂ.284/2020</u>**

**<u>ಸಿ.ಡಬ್ಲ್ಯೂಃ1 ಪಿ.ಡಬ್ಲ್ಯೂಃ1</u>**

ಸಾಕ್ಷಿದಾರನ ಹೆಸರು : ಶಂಕರಪ್ಪ
ತಂದೆಯ ಹೆಸರು : ಲೇಟ್ ಭೀಮಪ್ಪ
ವಯಸ್ಸು : 61 ವರ್ಷ
ಕೆಲಸ : ನಿವೃತ್ತ ಪಿ.ಎಸ್.ಐ
ವಾಸ : ಬಳ್ಳಾರಿ

**<u>ಸಾಕ್ಷಿಗೆ ದಿನಾಂಕಃ21.11.2023 ರಂದು ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ</u>**

ದಿಃ 01.09.2019 ರಿಂದ 15.09.2021 ರ ವರೆಗೆ ಹಚ್ಚೊಳ್ಳಿ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕಾರ್ಯನಿರ್ವಹಿಸಿದ್ದೆನೆ. ದಿಃ 26.03.2020 ರಂದು ಬೆಳಿಗ್ಗೆ 10.100 ಗಂಟೆಗೆ ಹಚ್ಚೊಳ್ಳಿ ಪೋಲೀಸ್ ಠಾಣೆಯಲ್ಲಿದ್ದಾಗ ಬೀರಳ್ಳಿ ಗ್ರಾಮದ ರಾವಿಹಾಳ್ ರಸ್ತೆಯಲ್ಲಿ ಅನಧಿಕೃತ ಮಧ್ಯ ಮಾರಾಟ ಮಾಡುತ್ತಿದಾರೆ ಎಂಬ ಖಚಿತ ಮಾಹಿತಿಯ ಮೇರೆಗೆ ನಾನು , ಚಾಸಾ 4 ರವರಿಗೆ ಇಬ್ಬರು ಪಂಚರನ್ನು ಬರಮಾಡಿಸಿಕೊಳ್ಳಲು ಹೇಳಿದಂತೆ ಅವರು ಇಬ್ಬರು ಪಂಚರಾದ ಚಾಸಾ 2 ಮತ್ತು 3 ಅವರಿಗೆ ದಾಳಿ ಮಾಡಲು ಕೋರಿಕೊಂಡ ಮೇರೆಗೆ ಅವರು ಒಪ್ಪಿ ಅವರಿಗೆ ನೋಟೀಸು ನೀಡಿ ನಂತರ ನಾನು , ಚಾಸಾ 2 ರಿಂದ 8 ರ ಜೊತೆ ಪಂಚರ ಸಂಗಡ ಇಲಾಖೆ ಜೀಪ್ ಸಂಖ್ಯೆ ಕೆ.ಎ 34 ಜಿ-258 ನೇದ್ದರಲ್ಲಿ ನಾವು ಮತ್ತು ಪಂಚರು ಬೆಳಿಗ್ಗೆ 10.30 ಗಂಟೆಗೆ ಠಾಣೆ ಬಿಟ್ಟು 10.45 ಗಂಟೆಗೆ ಬೀರಳ್ಳಿ ಗ್ರಾಮಕ್ಕೆ ಹೋಗಿ ಮರೆಗೆ ನಿಂತು ನೋಡಲು ಒಬ್ಬ ವ್ಯಕ್ತಿಯು ರಟ್ಟಿನ ಬಾಕ್ಸಿನಲ್ಲಿ ಮಧ್ಯವನ್ನು ಸಂಗ್ರಹಿಸಿ ಸಾರ್ವಜನಿಕರಿಗೆ ಕೊಡುತ್ತಿದ್ದನ್ನು ನೋಡಿ ನಾನು ಸಿಬ್ಬಂದಿ ಮತ್ತು ಪಂಚರು ಹೋಗಿ ದಾಳಿ ಮಾಡಲಾಗಿ ಮಧ್ಯವನ್ನು ಮಾರಾಟ ಮಾಡುತ್ತಿದ್ದ

ವ್ಯಕ್ತಿಯು ಸಾರ್ವಜನಿಕರು ಓಡಿ ಹೋಗಿರುತ್ತಾರೆ, ಹಿಡಿಯಲು ಪ್ರಯತ್ನಿಸಿದಾಗ ಓಡಿ ಹೋದ ವ್ಯಕ್ತಿಯು ಸಿಕ್ಕಿರುವುದಿಲ್ಲ. ನಾನು ಸಿಬ್ಬಂದಿ ಹಾಗೂ ಪಂಚರ ಸಂಗಡ ಸ್ಥಳವನ್ನು ಪರಿಶೀಲನೆ ಮಾಡಲಾಗಿ ಅಲ್ಲಿದ್ದ ಮೂರು ರಟ್ಟಿನ ಬಾಕ್ಸ್‌ಗಳಲ್ಲಿ ಮದ್ಯವು ಕಂಡು ಬಂದಿದ್ದು ಒಂದು ಬಾಕ್ಸ್‌ನಲ್ಲಿ 180 ಎಂ.ಎಲ್ ನ ಎಂ.ಸಿ ವಿಸ್ಕಿ 48 ಬಾಟಲಿಗಳು ಇದ್ದು ಒಂದು ಬಾಟಲಿಯ ಬೆಲೆ 162.22 ರೂ. ಒಟ್ಟು ಬೆಲೆ 7,786.56-00 ಇದ್ದು ಇನ್ನೊಂದು ಬಾಕ್ಸಿನಲ್ಲಿ 90 ಎಂ ಎಲ್ ನ 8 ಪಿ.ಎಂ ವಿಸ್ಕಿ 12 ಟೆಟ್ರಾ ಪೌಚ್ ಇದ್ದು ಒಂದು ಬಾಟಲಿಯ ಬೆಲೆ 45.10 ರೂ. ಒಟ್ಟು ಬೆಲೆ 541.02-00 ಇದ್ದು , ಇನ್ನೊಂದು ರಟ್ಟಿನ ಬಾಕ್ಸಿನಲ್ಲಿ 90 ಎಂ.ಎಲ್ ನ ಫ್ರೆಂಡ್ಸ್ ಕ್ಲಬ್ ವಿಸ್ಕಿ 48 ಟೆಟ್ರಾ ಪೌಚ್ ಇದ್ದು ಒಂದು ಬೆಲೆ 30.32 ರೂ. ಒಟ್ಟು ಬೆಲೆ 1,455.36-00 ಇದ್ದು , ಅವುಗಳನ್ನು ಪರಿಶೀಲನೆ ಮಾಡಿ ಇದರಲ್ಲಿ ಇದ್ದ ತಲಾ ಎರಡರಂತೆ ಬಿಳಿ ಚೀಲದಲ್ಲಿ ಹಾಕಿ ಬಾಯಿಯನ್ನು ಕಟ್ಟಿ ಅರಗಿನಿಂದ ಸೀಲಾಕಿ ಪಂಚರು ಮತ್ತು ನನ್ನ ಸಹಿ ಇದ್ದ ಚೀಟಿಯನ್ನು ಅಂಟಿಸಿ ಸ್ಥಳದಲ್ಲಿ ಬೆ.11.00 ರಿಂದ 11.30 ಗಂಟೆ ವರೆಗೆ ಪಂಚನಾಮೆಯನ್ನು ಬರೆದು ಅದಕ್ಕೆ ನನ್ನ ಸಹಿ ಮತ್ತು ಪಂಚರ ಸಹಿಯನ್ನು ಪಡೆದಿರುತ್ತೇನೆ. ನಮ್ಮ ಜೊತೆ ಚಾಸಾ 3 ರಿಂದ 8 ಇವರು ಪಂಚನಾಮೆಯ ಮೇಲೆ ಸಹಿ ಮಾಡಿರುತ್ತಾರೆ. ನಂತರ ನಾನು ಮುದ್ದೆಮಾಲನೊಂದಿಗೆ ಠಾಣೆಗೆ ಮರಳಿ ಮಧ್ಯಹ್ನ 1.00 ಗಂಟೆಗೆ ಹಚ್ಚೊಳ್ಳಿ ಪೋಲೀಸ್ ಠಾಣೆಯಲ್ಲಿ ಪ್ರ.ಥ.ವ ಯನ್ನು ಸಲ್ಲಿಸಿದ್ದೇನೆ. ನಂತರ ದಿಃ 27.05.2020 ರಂದು ನಾನು ಆರೋಪಿಯು ಮಾನ್ಯ ನ್ಯಾಯಾಲಯದ ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ಠಾಣೆಗೆ ಬಂದು ಠಾಣಾ ಅಧಿಕಾರಿ ಮುಂದೆ ಹಾಜರಾದ ವಿಚಾರಿಸಲು ಆರೋಪಿಯು ಗೋಪಾಲ್ ತಂದೆ ಹನುಮಂತಪ್ಪ , ವಾಸಃ ಬೀರಳ್ಳಿ ಎಂದು ತಿಳಿಸಿದ್ದು ಎಂದು ಗುರುತಿಸಿದ್ದು ಈತನು ತಪ್ಪು ಒಪ್ಪಿಕೊಂಡಿರುತ್ತಾನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾನೆ. ಪಂಚನಾಮೆಯನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು , ದೂರು /ಪ್ರ.ವ.ವ ಯನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು. ಪ್ರಥಮ ವರ್ತಮಾನ ವರದಿಯನ್ನು ನಿಪಿ.3 ಮತ್ತು ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದೆ ಇರುವ 180 ಎಂ.ಎಲ್ ಎಂ.ಸಿ ವಿಸ್ಕಿಯ ಎರಡು ಖಾಲಿ ಗಾಜಿನ ಬಾಟಲಿಗಳನ್ನು ಒಟ್ಟಾರೆಯಾಗಿ ಮುದ್ದೆಮಾಲು 1 ಎಂದು ಅದರ ಮೇಲೆ ಅಂಟಿಸಿದ ಚೀಟಿಯಲ್ಲಿರುವ ಸಾಕ್ಷಿಯ ಸಹಿಯನ್ನು ಮು.ಮ.1(ಎ) ಎಂದು 90 ಎಂ.ಎಲ್ 8 ಪಿ.ಎಂ ವಿಸ್ಕಿಯ ಎರಡು ಖಾಲಿ ಟೆಟ್ರಾ ಪ್ಯಾಕೆಟ್ಗಳು ಮುದ್ದೆಮಾಲು 2 ಎಂದು ಅದರ ಮೇಲೆ ಅಂಟಿಸಿದ ಚೀಟಿಯಲ್ಲಿರುವ ಸಾಕ್ಷಿಯ ಸಹಿಯನ್ನು ಮು.ಮ.2(ಎ) ಎಂದು 90 ಎಂ.ಎಲ್ ಫ್ರೆಂಡ್ಸ್ ಕ್ಲಬ್ ವಿಸ್ಕಿಯ ಖಾಲಿ ಟೆಟ್ರಾ ಪ್ಯಾಕೆಟ್ಗಳು ಮುದ್ದೆಮಾಲು 3 ಎಂದು ಅದರ ಮೇಲೆ ಅಂಟಿಸಿದ ಚೀಟಿಯಲ್ಲಿರುವ ಸಾಕ್ಷಿಯ ಸಹಿಯನ್ನು ಮು.ಮ.3(ಎ) ಎಂದು

## ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ ಜೆ ಕೆ ವಕೀಲರಿಂದ

ನಾನು ಸದರಿ ದಿನ ಯಾವುದೇ ದಾಳಿ ನಡೆಸಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಕೃತ್ಯ ಸ್ಥಳದಲ್ಲಿ ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದಲ್ಲಿಇ ರುವ ಮುದ್ದೆ ಮಾಲಿಗೆ ಮತ್ತು ಆರೋಪಿಗೆ ಯಾವುದೇ ಸಂಭಂದ ಇಲ್ಲ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ಅಪರಾದ ಮಾಡದೇ ಇದ್ದರೂ ಕೂಡ ಇಲಾಖಾ ಅಂಕಿ ಅಂಶ ಸಲುವಾಗಿ ಆತನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರವಾಗಿ : ಏನೂ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**